MYSORE LEGISLATIVE COUNCIL

Tuesday, 12th March 1968.

The House met in the Council Chamber, Vidhana Soudha, Bangalore, at Fifteen Minutes past Two of the Clock.

MR. CHAIRMAN (SRI S. C. EDKE) in the Chair.

STARRED QUESTIONS

(to which oral answers were given.)

Memorandum by the University Students Council

65. Sri M. V. VENKATAPPA (Graduates' Constituency).—

Will the Minister for Agriculture and Education be pleased to state :—

(*a*) whether the President and the Secretary of the Bangalore University Students' Council have presented a Memorandum to the Chief Minister out-lining the demands of the students with regard to the Language issue and incidents occurred during the Anti-Hindi agitation in Bangalore City ;

(*b*) if so, the main demands mentioned in the memorandum ;

(*c*) whether it has come to the notice of the Government that the Official Language Amendment Act passed and a resolution adopted along with it by the Parliament recently has created confusion among the students community and the general public of the State ;

(*d*) whether they would consider to take up this question with the Central Government for reconsideration and to solve certain difficulties encountered in its actual implementation ?

A.—Sri K. V. SHANKARA GOWDA (Minister for Agriculture and Education).—

(*a*) Yes.

(*b*) 1. Hindi should not be forced on the non-Hindi speaking people of the country.

(SRI K. V. SHANKARA GOWDA)

2 English should continue to be the official language and all administrative and U.P.S.C. Examinations should be conducted in English.

3 English should continue till such time that the people of the area are prepared for a change over.

4 To conduct an enquiry into the police excess on Monday the 22nd January 1968.

(*c*) and (*d*) This resolution has created some confusion which is mainly entertained by a few students. Steps are being taken to clear it up.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, (ಅ) ಪ್ರಶ್ನೆಗೆ ಉತ್ತರವಾಗಿ ವಿದ್ಯಾರ್ಥಿಗಳಿಂದ ನಾಲ್ಕು ಮುಖ್ಯವಾದಂಥ ಬೇಡಿಕೆಗಳು ಬಂದಿವೆಯೆಂದು ಹೇಳಿದ್ದೀರಿ. ಆ ನಾಲ್ಕು ಬೇಡಿಕೆಗಳ ಬಗ್ಗೆ ಇದುವರೆಗೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಈ ನಾಲ್ಕು ಬೇಡಿಕೆಗಳ ಬಗ್ಗೆ ಕಾರ್ಯಕ್ರಮತೆಗೆದುಕೊಳ್ಳಬೇಕೆಂಬ ನಿಯಮವೇನೂ ಇಲ್ಲ. ಸೂಕ್ತವಾದಂಥ ಬೇಡಿಕೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಏರ್ಪಾಡು ಮಾಡಲಾಗಿದೆ. ದೇಶದ ಹಿಂದಿಯೇತರರುಗಳ ಮೇಲೆ ಹಿಂದೀ ಭಾಷೆಯನ್ನು ಬಲತ್ಕಾರವಾಗಿ ಹೊರಿಸಬಾರದೆಂದು ಹೇಳಿದ್ದಾರೆ. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಏತಕ್ಕೆಂದರೆ, ನಮ್ಮ ಸರ್ಕಾರದವರು ಈಗಾಗಲೇ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದಾರೆ. ಈ ಪ್ರದೇಶದ ಜನರು ಈ ಬದಲಾವಣೆಗೆ ಸಿದ್ಧರಾಗುವವರೆಗೆ ಆಂಗ್ಲ ಭಾಷೆಯನ್ನು ಮುಂದುವರಿಸಿಕೊಂಡು ಬರಬೇಕೆಂದು ಕೇಳಿದ್ದಾರೆ, ಇಂಗ್ಲೀಷನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಎಲ್ಲಿಯವರೆಗೆ ಇಂಗ್ಲೀಷ್ ಇರಬೇಕೆಂದು ಹೇಳುತ್ತಾರೋ ಅಲ್ಲಿಯವರೆಗೆ ಮಾತ್ರ ಇರುತ್ತದೆ. ಮುಂದೆ ಇರುವುದಕ್ಕೆ ಸಾಧ್ಯವಿಲ್ಲ. ಇನ್ನು ಪೋಲೀಸಿನವರ ವರ್ತನೆಯ ಬಗ್ಗೆ ತನಿಖೆಯನ್ನು ನಡಸಬೇಕೆಂದು ಕೇಳಿದ್ದಾರೆ, ಈಗಾಗಲೇ ಡಿವಾರ್ಟ್‌ಮೆಂಟರ್ ಎನ್‌ಕ್ವೈರಿ ಈ ಬಗ್ಗೆ ನಡೆಯುತ್ತಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಭಾಷಾ ಮಸೂದೆಯನ್ನು ಪಾರ್ಲಮೆಂಟ್‌ನಲ್ಲಿ ವಾಪ್ ಮಾಡಿದರು. ಮತ್ತು ಅದಕ್ಕೆ ಲಗತ್ತಿಸಿರುವ ನಿರ್ಣಯದಿಂದಾಗಿ ಹಿಂದಿಯೇತರರಲ್ಲಿ ಗೊಂದಲವುಂಟಾಗಿರುವುದರಿಂದ, ಹಿಂದಿಯೇತರ ರಾಜ್ಯಗಳು ಮತ್ತು ಕೇಂದ್ರಸರ್ಕಾರದವರು ಒಂದು ಒಪ್ಪಂದಕ್ಕೆ ಬರುವವರೆಗೆ ಈ ನಿರ್ಣಯವನ್ನು ಜಾರಿಗೆ ತರಬಾರದೆಂದು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಲು ಆರೋಚನೆ ಮಾಡಿದ್ದಾರೆಯೆ ?

ಶ್ರೀ ಕೆ. ವಿ. ಶಂಕರಗೌಡ.—ಆ ನಿರ್ಣಯವನ್ನು ಬದಲಾವಣೆ ಮಾಡಬೇಕು ಅನ್ನತಕ್ಕಂಥ ವಿಷಯವಿದಲ್ಲ ನಾವು ಕೇಂದ್ರಸರ್ಕಾರಕ್ಕೆ ಈಗಾಗಲೇ ತಿಳಿಸಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಭಾಷಾ ನಿರ್ಣಯ ಮಾಡುವುದಕ್ಕೆ ಮೊದಲು ನಮ್ಮ ಸರ್ಕಾರದಿಂದ ಒಪ್ಪಿಗೆ ಏನಾದರೂ ಕೇಂದ್ರಸರ್ಕಾರದವರು ಕೇಳಿದ್ದಾರೆಯೇ ಮತ್ತು ಏನು ಉತ್ತರ ಕೊಟ್ಟಿದ್ದಾರೆ ?

ಶ್ರೀ ಕೆ. ವಿ. ಶಂಕರಗೌಡ.— ಅವರು ಏನೂ ಕೇಳಲಲ್ಲ, ಮತ್ತು ಏನೂ ಉತ್ತರ ಕೊಡಲಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಯು. ಪಿ. ಎಸ್. ಸಿ. ಪರೀಕ್ಷೆ ಇಂಗ್ಲೀಷನಲ್ಲಿ ನಡೆಯಬೇಕೆಂದು ವಿದ್ಯಾರ್ಥಿ ಕೌನ್ಸಿಲನವರು ಕೇಳಿದ್ದಾರೆ. ಇಂಗ್ಲೀಷ್ ಬದಲು ಪ್ರಾಂತ್ಯದ ಭಾಷೆ ಮಾಡಲು ಯು. ಪಿ. ಎಸ್. ಸಿ. ಯವರು ಒಪ್ಪಿದ್ದಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—14 ಪ್ರಾಂತ ಭಾಷೆಗಳಲ್ಲಿಯೂ ಕೂಡ ನಡೆಯುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈಗ ಮುಂದೆ ಬರುವ ಪರೀಕ್ಷೆಯೂ ಪ್ರಾಂತ ಭಾಷೆಯಲ್ಲಿ ಮಾಡಬೇಕೆಂದು ಒಪ್ಪಿಕೊಂಡಿದ್ದಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಹೌದು ಒಪ್ಪಿಕೊಂಡಿದ್ದಾರೆ.